# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 942 |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಮಗಳೂರು ನಗರದಲ್ಲಿ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ಪ್ರಧಾನ ಮಂತ್ರಿ ಆವಾಸ್ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಜಿ+2 ಮಾದರಿಯಲ್ಲಿ ಮನೆಗಳ ನಿರ್ಮಾಣ ಮಾಡಲು ಪ್ರಾರಂಭಿಸಿದ್ದು ಯಾವಾಗ; ಕರಾರು ಪ್ರಕಾರ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು; | ಚಿಕ್ಕಮಗಳೂರು ನಗರದಲ್ಲಿ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ಪ್ರಧಾನ ಮಂತ್ರಿ ಆವಾಸ್ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಜಿ+2 ಮಾದರಿಯಲ್ಲಿ 1509 ಮನೆಗಳನ್ನು ನಿರ್ಮಾಣ ಮಾಡಲು ದಿನಾಂಕ:12.08.2021 ರಂದು ಪ್ರಾರಂಭಿಸಿದ್ದು, ಕರಾರು ಪ್ರಕಾರ ಕಾಮಗಾರಿಯು ದಿನಾಂಕ:11.08.2023 ರಂದು ಪೂರ್ಣಗೊಳ್ಳಬೇಕಾಗಿರುತ್ತದೆ. |
| ಆ) | ಈ ಮನ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತವೆಷ್ಟು; ಇದುವರೆಗೂ ಎಷ್ಟು ಅನುದಾನ ಬಿಡುಗಡೆ ಆಗಿದೆ; ಎಷ್ಟು ಹಣ ವೆಚ್ಚ ಮಾಡಲಾಗಿದೆ; | ಈ ಮನೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.113.39 ಕೋಟಿಗಳು.<br><br>ಇದುವರೆಗೂ ರೂ.46.91 ಕೋಟಿಗಳ ಅನುದಾನ ಬಿಡುಗಡೆ ಆಗಿದ್ದು, ರೂ.44.58 ಕೋಟಿಗಳು ವೆಚ್ಚ ಮಾಡಲಾಗಿದೆ. |
| ಇ) | ಭೌತಿಕವಾಗಿ ಈವರೆಗೆ ಎಷ್ಟು ಪ್ರಗತಿ ಸಾಧಿಸಲಾಗಿದೆ; ಈ ಮನ ನಿರ್ಮಾಣ ಕಾಮಗಾರಿಯು ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಾಮಗಾರಿ ವಿಳಂಬಕ್ಕೆ ಕಾರಣಗಳೇನು; | ಒಟ್ಟು 1509 ಮನೆಗಳ ಪೈಕಿ 296 ಮನೆಗಳು ಮುಕ್ತಾಯ ಹಂತದಲ್ಲಿದ್ದು, 96 ಮನೆಗಳು ಛಾವಣಿ ಹಂತದಲ್ಲಿವೆ, 304 ಮನೆಗಳು ತಳಪಾಯ ಹಂತದಲ್ಲಿವೆ. 660 ಮನೆಗಳನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು. ಉಳಿದ 153 ಮನೆಗಳನ್ನು ಪ್ರಾರಂಭಿಸಲು ಜಮೀನು ಲಭ್ಯವಿರುವುದಿಲ್ಲ.<br><br>**ಮನೆಗಳ ನಿರ್ಮಾಣ ಕಾಮಗಾರಿಯು ವಿಳಂಬಕ್ಕೆ ಕಾರಣಗಳು:**<br><br>1. ಯೋಜನಾ ಪ್ರದೇಶವು ಬೆಟ್ಟ ಗುಡ್ಡಗಳಿಂದ ಕಡಿದಾದ ಇಳಿಜಾರಿನಿಂದ ಕೂಡಿದ್ದರಿಂದ, ಸದರಿ ಪ್ರದೇಶವನ್ನು ಸಮತಟ್ಟಾಗಿ ಮಾಡುವಲ್ಲಿ ವಿಳಂಬ.<br>2. ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬ.<br>3. ಫಲಾನುಭವಿಗಳು ಸಕಾಲದಲ್ಲಿ ವಂತಿಕೆ ಪಾವತಿಸದೇ ಇರುವುದು. ಅವರುಗಳಿಗೆ ಬ್ಯಾಂಕ್ ಗಳು ಸಕಾಲದಲ್ಲಿ ಸಾಲ ಮಂಜೂರು ಮಾಡದೇ ಇರುವುದು. ಇದರಿಂದಾಗಿ ಅನುದಾನದ ಕೊರತೆಯು ಉಂಟಾಗಿ ಕಾಮಗಾರಿಯಲ್ಲಿ ವಿಳಂಬ.<br>4. ನಗರ ಸ್ಥಳೀಯ ಸಂಸ್ಥೆಯು ಸಕಾಲದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ತಮ್ಮ ಪಾಲಿನ ಮೊತ್ತ ಒದಗಿಸುವಲ್ಲಿ ವಿಳಂಬ. |
| ಈ) | ಕಾಮಗಾರಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>• ಫಲಾನುಭವಿಗಳು ಪಾವತಿಸಬೇಕಾದ ವಂತಿಕೆ ಮೊತ್ತವನ್ನು ಪಾವತಿಸಲು ಅನುಕೂಲವಾಗುವಂತೆ ಫಲಾನುಭವಿಗಳಿಗೆ ಬ್ಯಾಂಕ್ ಗಳಿಂದ ಸಾಲ ಸೌಲಭ್ಯ ಒದಗಿಸಲು ಕ್ರಮವಹಿಸಿದ್ದು, ಈವರೆಗೆ 1375 ಫಲಾನುಭವಿಗಳ ಅರ್ಜಿಗಳನ್ನು ಬ್ಯಾಂಕಿಗೆ ಸಲ್ಲಿಸಲಾಗಿದೆ ಹಾಗೂ 605 ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲಾಗಿದೆ.<br><br>• ಸದರಿ ಯೋಜನೆಯಡಿ ಇರುವ SC/ST ಫಲಾನುಭವಿಗಳಿಗೆ ನಗರ ಸಭೆ ವತಿಯಿಂದ SCP/TSP ಘಟಕದಡಿ ರೂ. 3.32 ಕೋಟಿಗಳ ಮೊತ್ತವನ್ನು ಒದಗಿಸಲಾಗಿದೆ. |

| | | |
|---|---|---|
| | | • ಫಲಾನುಭವಿಗಳು ಪಾವತಿಸಬೇಕಾದ ವಂತಿಕೆ ಮೊತ್ತ ರೂ. 2012 ಕೋಟಿಗಳು (47858 ಫಲಾನುಭವಿಗಳಿಗೆ) ಮತ್ತು ಎಲ್ಲಾ ಯೋಜನೆಗಳ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಅಗತ್ಯವಿರುವ ಅನುದಾನ ರೂ.332 ಕೋಟಿಗಳು ಸೇರಿದಂತೆ ಒಟ್ಟಾರೆಯಾಗಿ ರೂ. 2344.54 ಕೋಟಿಗಳ ಮೊತ್ತವನ್ನು ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. (ಚಿಕ್ಕಮಗಳೂರು ನಗರದಲ್ಲಿ 1511 ಮನೆಗಳನ್ನು ನಿರ್ಮಿಸುತ್ತಿರುವ ಯೋಜನೆಯೂ ಸೇರಿದಂತೆ) |

ಸಂಖ್ಯೆ: ವಇ 159 ಹೆಚ್‌ಎಫ್‌ಎ 2025]

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.